







ಮಲ್ಲೈಕಾ





ಅರ್ಬಾಜ್ ಖಾನ್

ಕಾರಣ ಈ ಚಿತ್ರದ ಮೊದಲ ದಿನದ ಕಲೆಕ್ಷನ್ ರಜನಿಕಾಂತ್‌ನ 'ಕಬಾಲಿ' ಸಿನಿಮಾದ ಕಲೆಕ್ಷನ್ ದಾಖಲೆಯನ್ನು ಮುರಿದಿರುವುದು. ಅಮೆರಿಕ, ಮಲೇಷ್ಯಾ, ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಕಿಂಗ್‌ಡಂಗಳಲ್ಲೂ ಬಿಡುಗಡೆಯಾಗಿರುವ ಚಿತ್ರ, ಅಲ್ಲೂ ಹೌಸ್‌ಫುಲ್ ಆಗಿ ಓಡುತ್ತಿದೆ. ಈ ಚಿತ್ರದ ಈ ಮಟ್ಟಿನ ಯಶಸ್ಸು ನಟ ವಿಜಯ್ ಅವರಲ್ಲಿ ರಾಜಕೀಯದ ಹೊಸ ಕನಸುಗಳನ್ನು ಚಿಗುರಿಸಿದೆಯಂತೆ. ಈಗಾಗಲೆ ರಜನಿಕಾಂತ್ ಮತ್ತು ಕಮಲಹಾಸನ್ ತಮಿಳುನಾಡಿನ ರಾಜಕೀಯದ ತಲೆಬಾಗಿಲಲ್ಲಿ ನಿಂತು ಕಾಯುತ್ತಿದ್ದಾರೆ. ಅವರ ಜತೆಗೆ ಈಗ ವಿಜಯ್ ಹೆಸರು ಕೂಡಾ ತಳುಕು ಹಾಕಿಕೊಂಡಿದೆ. ಏನಾಗುತ್ತೋ ನೋಡಬೇಕು.

## ಮಲೈಕಾ ಸೀಕ್ರೆಟ್

ಮಲೈಕಾ ಮತ್ತು ಅರ್ಬಾಜ್ ಖಾನ್ ನಡುವೆ ಮದುವೆ ಮುರಿದುಬೀಳಲು ಕಾರಣವೇನು ಎನ್ನುವುದೀಗ ಬಹಿರಂಗಗೊಂಡಿದೆ. 18 ವರ್ಷಗಳಿಂದ ಅನ್ಯೋನ್ಯವಾಗಿ ಒಟ್ಟಿಗೇ ಜೀವಿಸಿದ್ದ ಇಬ್ಬರೂ ಬೇರೆಯಾಗಲು ಕಾರಣ ಮಲೈಕಾಳೇ ಅಂತೆ! ಅರ್ಬಾಜ್ ಬಾಲಿವುಡ್‌ನಲ್ಲಿ ಆರಕ್ಕೇರದೆ ಮೂರಕ್ಕಿಳಿಯದೆ ಫ್ಲಾಪ್ ಆಗುತ್ತಿರುವುದನ್ನು ಸಹಿಸಲಾಗದೆ ಮಲೈಕಾ ದೂರವಾದಳಂತೆ. ವೃತ್ತಿ ಜೀವನದಲ್ಲಿ ದೊಡ್ಡ ಸ್ಟಾರ್ ಆಗದೆ, ಸೋದರ ಸಲ್ಮಾನ್ ಖಾನ್ ನೆರಳಲ್ಲೇ ತನ್ನ ಗಂಡ ಬದುಕುವುದನ್ನು ಸಹಿಸಲು ಮಲೈಕಾಳಿಗೆ ಆಗಲಿಲ್ಲವಂತೆ.

ಹಾಗೆಂದು ಮಲೈಕಾ ಹೇಳಿಲ್ಲ; ಬಾಲಿವುಡ್‌ನ ಪಂಡಿತರು ಪಿಸುಗುಟ್ಟುತ್ತಿದ್ದಾರೆ. ಸಲ್ಮಾನ್ ತನ್ನ ಸಿನಿಮಾಗಳಲ್ಲಿ ಸೋದರ ಅರ್ಬಾಜ್‌ಗೆ ಅವಕಾಶಗಳನ್ನು ಕೊಟ್ಟು ಬೆಳೆಸಲು ಯತ್ನಿಸಿದ್ದು ನಿಜ. ಆದರೆ ಆ ಬಳಿಕ–ವಾದರೂ ಕಳಚಿಕೊಂಡು ಪ್ರತ್ಯೇಕವಾಗಿ ಹೀರೊ ಆಗಿ ಬೆಳೆಯಬೇಕಿತ್ತು ಎಂದು ಮಲೈಕಾ ಸಲಹೆ ನೀಡಿದರೂ ಅರ್ಬಾಜ್ ಕಿವಿಗೆ ಹಾಕಿಕೊಳ್ಳಲಿಲ್ಲವಂತೆ. ಈ ಮಧ್ಯೆ ಮಲೈಕಾಳ ಡ್ರೆಸ್, ಗೆಳತಿಯರ ದಂಡು ಮತ್ತು ಹೊರಾಂಗಣ ಚಟುವಟಿಕೆಗಳ ಬಗ್ಗೆ ಸಲ್ಮಾನ್ ಕೂಡಾ ಅಪಸ್ವರ ಎತ್ತಿದ್ದು ಗಂಡ–ಹೆಂಡಿರ ನಡುವೆ ಮುನಿಸು ಹೆಚ್ಚಲು ಕಾರಣವಾಯಿತಂತೆ.

■ ಬಿಂದು